ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಏಡಿಪಿ/2022-23

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 20-05-2022

**ಸುತ್ತೋಲೆ**

ವಿಷಯ: **ಭಯೋತ್ಪಾದನಾ ವಿರೋಧಿ** ದಿನವನ್ನು ಆಚರಿಸುವ ಬಗ್ಗೆ.
ಉಲ್ಲೇಖ: ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/19/2021/2022-23/81
ದಿನಾಂಕ: 20-05-2022

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಷ್ಟ್ರದ ಯುವ ಜನತೆಯನ್ನು **ಭಯೋತ್ಪಾದನೆ ವಿರುದ್ಧ** ಜಾಗೃತಗೊಳಿಸಲು ಆ ಮೂಲಕ ರಾಷ್ಟ್ರದ ಏಕ್ಯತೆಯನ್ನು ಹಾಗೂ ಸಾರ್ವಭೌಮತ್ವವನ್ನು ಬಲಪಡಿಸಲು **ದಿನಾಂಕ: 21-05-2022** ರಂದು **ಭಯೋತ್ಪಾದನಾ ವಿರೋಧಿ** ದಿನವನ್ನು ಪ್ರತಿಜ್ಞಾವಚನ ಸ್ವೀಕಾರದೊಂದಿಗೆ ಆಚರಿಸಲು ರಾಜ್ಯದ ಎಲ್ಲಾ ತಾಂತ್ರಿಕ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ. ಈ ಪತ್ರದೊಂದಿಗೆ ಪ್ರತಿಜ್ಞಾವಚನ (ಲಗತ್ತಿಸಿದೆ)

ಕಾರ್ಯಕ್ರಮವನ್ನು ಆಚರಿಸಿದ ಬಗ್ಗೆ ಒಂದು ವರದಿಯನ್ನು ರಾಷ್ಟ್ರೀಯ ಸೇವಾ ಯೋಜನೆಯ ಕಛೇರಿಗೆ ಮಿಂಚಂಚೆ nssdte@gmail.com ಕಳುಹಿಸುವುದು.

ಪ. ನಿರ್ದೇಶಕರು
20/05/2022

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿ:-

1. ರಾಜ್ಯ ಎನ್.ಎಸ್.ಎಸ್ ಅಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು-01
2. ಇ ಆಡಳಿತ - ಅಂತರ್ ಜಾಲ ತಾಣದಲ್ಲಿ ಪ್ರಕಟಿಸಲು
3. ಕಛೇರಿ ಕಡತಕ್ಕೆ.

# ಭಯೋತ್ಪಾದನಾ ವಿರೋಧಿ ದಿನದ

# ಪ್ರಮಾಣ ವಚನ

ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪ್ರಜೆಗಳಾದ ನಾವು ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಎದುರಿಸುತ್ತೇವೆ ಎಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇವೆ. ನಮ್ಮ ಸಹಬಾಂಧವರಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಲು ಹಾಗೂ ಉತ್ತೇಜಿಸಲು ಮತ್ತು ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆ ಒಡ್ಡುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ನಾವು ಪಣ ತೊಡುತ್ತೇವೆ.



Generated from eOffice by PRATAP LINGAIAH, YSD-SNO(PL), STATE NSS OFFICER, YOUTH SEC on 17/05/2022 04:24 PM